# ಕರ್ನಾಟಕ ವಿಧಾನ ಪರಿಷತ್ತು

1. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1233 (1404)

2. ವಿಧಾನ ಪರಿಷತ್ತಿನ ಸದಸ್ಯರ ಹೆಸರು : ಶ್ರೀ ಕೆ ಪ್ರತಾಪಚಂದ್ರ ಶೆಟ್ಟಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)

3. ಉತ್ತರಿಸಬೇಕಾದ ದಿನಾಂಕ : 28.02.2018

4. ಉತ್ತರಿಸಬೇಕಾದ ಸಚಿವರು : ಮಾನ್ಯ ಅರಣ್ಯ, ಜೀವಿಪರಿಸ್ಥಿತಿ ಮತ್ತು ಪರಿಸರ ಸಚಿವರು

| ಕ್ರ ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದಲ್ಲಿ ಕರಾವಳಿ ಪ್ರದೇಶದ ಜನರಿಗೆ ಕರಾವಳಿ ನಿಯಂತ್ರಣ ವಲಯದ ನಿಬಂಧನೆಗಳಿಂದ, ಮನೆ ಕಟ್ಟಲು, ಡೋರ್ ನಂಬರ್ ಪಡೆಯಲು, ವಿದ್ಯುತ್ ಸಂಪರ್ಕ ಪಡೆಯಲು ಸಮಸ್ಯೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ನೂರಾರು ವರ್ಷಗಳಿಂದ ಅದೇ ಸ್ಥಳದಲ್ಲಿ ವಾಸಿಸುತ್ತಿದ್ದು, ಸ್ವಂತ ಜಮೀನನ್ನು ಹೊಂದಿದ್ದರೂ, ಕೂಡ ಆಗುತ್ತಿರುವ ಈ ಸಮಸ್ಯೆಗಳನ್ನು ಪರಿಹರಿಸಲು ಸರ್ಕಾರದ ಕ್ರಮವೇನು; | ರಾಜ್ಯದಲ್ಲಿ ಕರಾವಳಿ ಪ್ರದೇಶದ ಜನರ ಹಿತಕ್ಕಾಗಿ ಕರಾವಳಿ ನಿಯಂತ್ರಣ ವಲಯ ಅಧಿಸೂಚನೆ 2011 ರಲ್ಲಿ ಅಗತ್ಯವಾದ ಮಾರ್ಪಡುಗಳನ್ನು ತರುವಂತೆ ಕೋರಿ ದಿನಾಂಕ: 18.02.2018 ರಂದು ಕೇಂದ್ರ ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಲಾಗಿರುತ್ತದೆ. ಮತ್ತೊಮ್ಮೆ ಕೇಂದ್ರ ಸರ್ಕಾರಕ್ಕೆ ದಿನಾಂಕ: 03.05.2017 ರಂದು ಪತ್ರ ಬರೆದು ಪ್ರಸ್ತಾವನೆಯನ್ನು ತ್ವರಿತವಾಗಿ ಪರಿಗಣಿಸಲು ಕೋರಲಾಗಿದೆ.<br>i. ರಾಜ್ಯದ ಸಮುದ್ರ ಪ್ರಭಾವ ಹೊಂದಿರುವ ನದಿಗಳ ಎರಡು ಬದಿಗಳಲ್ಲಿ ಸಿ.ಆರ್.ಝಡ್ ವ್ಯಾಪ್ತಿಯನ್ನು ಕೇರಳ ರಾಜ್ಯದ ದ್ವೀಪಗಳಿಗೆ ಅನ್ವಯಿಸಿರುವಂತೆ 50 ಮೀಟರ್‌ಗೆ ನಿಗದಿಗೊಳಿಸುವುದು.<br>ii. ಮೀನುಗಾರಿಕೆ ಮತ್ತು ಇತರೆ ಸಂಬಂಧಿ ಸೌಲಭ್ಯಗಳ ನಿರ್ಮಾಣಗಳಿಗೆ ಹಾಲಿ ಗೋವಾ ರಾಜ್ಯದಲ್ಲಿ ಇರುವಂತೆ ಸಂಬಂಧಪಟ್ಟ ಗ್ರಾಮ ಪಂಚಾಯಿತಿಗಳಿಂದಲೇ ಅನುಮತಿ ನೀಡುವುದು.<br>iii. ಮೀನುಗಾರರು ಮತ್ತು ಮತ್ತಿತರ ಕಡಲ ತೀರದ ನಿವಾಸಿಗಳಿಗೆ ಅಗತ್ಯವಾದ ಮೂಲ ಸೌಲಭ್ಯ ಒದಗಿಸುವ ದೃಷ್ಟಿಯಿಂದ ಕಡಲ ತೀರದ ಉದ್ದಕ್ಕೂ ಹಾಲಿ ಇರುವ 200 ಮೀಟರ್‌ಗಳ "ಅಭಿವೃದ್ಧಿ ನಿಷಿದ್ಧ ಪ್ರದೇಶ" (ಎನ್.ಡಿ.ಝಡ್) ಪ್ರದೇಶದ ಅಗಲವನ್ನು 50 ಮೀಟರ್ ಅಗಲಕ್ಕೆ ಮಿತಿಗೊಳಿಸುವುದು.<br>iv. ಬಹುತೇಕ ಮೀನುಗಾರರ ಗ್ರಾಮಗಳು ಕಡಲ ತೀರದಿಂದ 200 ಮೀಟರ್ ವ್ಯಾಪ್ತಿ ಒಳಗಿದ್ದು, "ಅಭಿವೃದ್ಧಿ ನಿಷಿದ್ಧ ಪ್ರದೇಶ" (ಎನ್.ಡಿ.ಝಡ್) ನಲ್ಲಿ ಬರುತ್ತವೆ. ಆದುದರಿಂದ ಸರ್ಕಾರದ ಮತ್ಸ್ಯಾಶ್ರಯ ಮತ್ತಿತರ ಗೃಹ ನಿರ್ಮಾಣ ಯೋಜನೆಗಳ ಮೂಲಕ ಮೀನುಗಾರರಿಗೆ ಮತ್ತು ಸ್ಥಳೀಯ ನಿವಾಸಿಗಳಿಗೆ ಅನುಕೂಲ ಕಲ್ಪಿಸುವುದು ಕಷ್ಟಸಾಧ್ಯವಾಗಿರುವುದರಿಂದ ಎನ್.ಡಿ.ಝಡ್ ವ್ಯಾಪ್ತಿಯಲ್ಲಿ ಇಂತಹ ಗೃಹ ನಿರ್ಮಾಣ ಕಾರ್ಯಕ್ರಮಗಳ ಅನುಷ್ಠಾನಕ್ಕೆ ಅವಕಾಶ ಕಲ್ಪಿಸುವುದು.<br>v. ಉತ್ತಮ ಅಭಿವೃದ್ಧಿ ಹೊಂದಿರುವ ಮೀನುಗಾರರ ಗ್ರಾಮಗಳನ್ನು ಸಿ.ಆರ್.ಝಡ್. – II ವರ್ಗಕ್ಕೆ ಸೇರಿಸಲು ಅವಕಾಶ ಕಲ್ಪಿಸುವುದು. |

| | | |
|---|---|---|
| ಆ) | 2017 ರ ಕರಡು ಕರಾವಳಿ ನಿಯಂತ್ರಣ ವಲಯ ಅಧಿಸೂಚನೆಯು ಅಂತಿಮಗೊಂಡಿದೆಯೇ; ಕರಡು ಅಧಿಸೂಚನೆಗೆ ಜನರು ನೀಡಿರುವ ಆಕ್ಷೇಪಣೆಗಳನ್ನು ಪರಿಗಣಿಸಲಾಗಿದೆಯೇ; | ಕರಾವಳಿ ನಿಯಂತ್ರಣ ವಲಯ ಅಧಿಸೂಚನೆ 2011 ರಂತೆ ತಯಾರಿಸಿರುವ ಕರಡು ಕರ್ನಾಟಕ ರಾಜ್ಯ ಕರಾವಳಿ ವಲಯ ನಿರ್ವಹಣಾ ಯೋಜನೆ ಇನ್ನೂ ಅಂತಿಮಗೊಂಡಿರುವುದಿಲ್ಲ. ಸದರಿ ಕರಡು ಕರ್ನಾಟಕ ರಾಜ್ಯ ಕರಾವಳಿ ವಲಯ ನಿರ್ವಹಣಾ ಯೋಜನೆ ಬಗ್ಗೆ ಜನರಿಂದ ನೀಡಲಾಗಿರುವ ಆಕ್ಷೇಪಣೆಗಳನ್ನು ಕರಾವಳಿ ನಿಯಂತ್ರಣ ವಲಯ ಅಧಿಸೂಚನೆ 2011 ರಂತೆ ಪರಿಶೀಲಿಸಿ, ಅದರಂತೆ ಅರ್ಹವಿರುವ ಅಕ್ಷೇಪಣೆಗಳನ್ನು ಪರಿಗಣಿಸಿ, ಕರಡು ಕರ್ನಾಟಕ ರಾಜ್ಯ ಕರಾವಳಿ ವಲಯ ನಿರ್ವಹಣಾ ಯೋನೆಯನ್ನು ಪರಿಷ್ಕರಿಸಿದ ನಂತರ ಅಂತಿಮಗೊಳಿಸುವ ಬಗ್ಗೆ ಕ್ರಮವಹಿಸಲಾಗುತ್ತಿದೆ. |
| ಇ) | ಕರಾವಳಿ ನಿಯಂತ್ರಣ ವಲಯ ಅಧಿಸೂಚನೆಯಲ್ಲಿ ವಲಯಗಳನ್ನು ಯಾವ ಮಾನದಂಡದಲ್ಲಿ ಗುರುತಿಸಲಾಗಿದೆ; ಮೊದಲನೆ ಅಧಿಸೂಚನೆಯಲ್ಲಿ ಇದ್ದ ವಲಯವು ಹೊಸ ಅಧಿಸೂಚನೆಯಲ್ಲಿ ಬೇರೊಂದು ವಲಯವಾಗಿ ಪರಿವರ್ತನೆಯಾಗಲು ಕಾರಣವೇನು; ಬೇರೆ ರಾಜ್ಯಗಳಂತೆ ನಿಯಂತ್ರಣ ರೇಖೆಯ ಮಿತಿಯನ್ನು 50 ಮೀಟರ್‌ಗೆ ಇಳಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ; ಈ ಬಗ್ಗೆ ಸರ್ಕಾರದ ಕ್ರಮವೇನು; | ಕರಾವಳಿ ನಿಯಂತ್ರಣ ವಲಯ ಅಧಿಸೂಚನೆ 2011 ರಲ್ಲಿ ಕರಾವಳಿ ನಿಯಂತ್ರಣ ವಲಯ ಪ್ರದೇಶವನ್ನು CRZ-I, CRZ-II, CRZ-III ಹಾಗೂ CRZ-IV ಒಟ್ಟು ನಾಲ್ಕು ವಲಯಗಳನ್ನಾಗಿ ಗುರುತಿಸಲಾಗಿದೆ. ಅವುಗಳ ಮಾನದಂಡಗಳು ಈ ಕೆಳಗಿನಂತಿವೆ.<br><br>**1. ಕರಾವಳಿ ನಿಯಂತ್ರಣ ವಲಯ –I :**<br><br>(i) ಪರಿಸರ ದೃಷ್ಟಿಯಿಂದ ಬಲು ನಾಜೂಕಾದ ಪ್ರದೇಶಗಳು ಮತ್ತು ಯಾವುದರ ಭೂ ಮೇಲ್ಮೈ ಲಕ್ಷಣಗಳು ಕರಾವಳಿಯ ಅಖಂಡತೆಯನ್ನು ನಿರ್ವಹಿಸಿಕೊಂಡು ಬರುವಲ್ಲಿ ಮಹತ್ವದ ಪಾತ್ರವಹಿಸುವ ಪ್ರದೇಶಗಳು.<br><br>(a) ಕಾಂಡ್ಲಾ ಕಾಡುಗಳು : ಕಾಂಡ್ಲಾ ಕಾಡುಗಳ ಪ್ರದೇಶ 1000 ಚದರ ಮೀಟರುಗಳಿಗಿಂತ ಹೆಚ್ಚಾಗಿದ್ದರೆ, 50 ಮೀಟರುಗಳ ಬಫರ್ ಪ್ರದೇಶವನ್ನು ಒದಗಿಸತಕ್ಕದ್ದು.<br>(b) ಹವಳಗಳು ಮತ್ತು ಹವಳ ದಿಬ್ಬಗಳು ಹಾಗೂ ಅವುಗಳಿಗೆ ಸಂಬಂಧಪಟ್ಟ ಜೀವಿ ವೈವಿಧ್ಯಗಳು.<br>(c) ಮರಳು ದಿಬ್ಬಗಳು.<br>(d) ಜೈವಿಕವಾಗಿ ಸಕ್ರಿಯವಾದ ಕೆಸರು ಮೈದಾನ.<br>(e) ರಾಷ್ಟ್ರೀಯ ಉದ್ಯಾನ, ಕಡಲು ಉದ್ಯಾನ, ಅಭಯಾರಣ್ಯಗಳು, ಮೀಸಲು ಅರಣ್ಯಗಳು, ವನ್ಯಜೀವಿ ಜೀವವಾಸಗಳು ಮತ್ತಿತರ ವನ್ಯಜೀವಿ (ಸಂರಕ್ಷಣಾ) ಅಧಿನಿಯಮ 1972 (1972 ರ 53) ಅರಣ್ಯ (ಸಂರಕ್ಷಣಾ) ಅಧಿನಿಯಮ, 1986 (1986 ರ 29) ರ ಉಪಬಂಧಗಳ ಅಡಿಯಲ್ಲಿ ಸಂರಕ್ಷಿತ ಪ್ರದೇಶಗಳು ಹಾಗು ಜೀವಾವರಣ ಮೀಸಲು ಪ್ರದೇಶಗಳು.<br>(f) ಉಪ್ಪು ಜೌಗು ಪ್ರದೇಶಗಳು.<br>(g) ಕಡಲಾಮೆ ಮೊಟ್ಟೆ ಇಡುವ ಭೂಮಿಗಳು.<br>(h) ಲಾಳದ ಏಡಿ ಜೀವವಾಸಗಳು.<br>(i) ಸಮುದ್ರ ಹುಲ್ಲು ಪಾತಿಗಳು.<br>(j) ಹಕ್ಕಿಗಳ ಗೂಡುಕಟ್ಟುವ ಜಾಗಗಳು.<br>(k) ಪುರಾತತ್ವ ಮಹತ್ವದ ಮತ್ತು ಪರಂಪರೆಯ ನಿವೇಶನಗಳ ಪ್ರದೇಶ ಅಥವಾ ನಿರ್ಮಿತಿಗಳು. |

| | | |
|---|---|---|
| | | (ii) ಉಬ್ಬರ ರೇಖೆ ಮತ್ತು ಇಳಿತ ರೇಖೆಯ ನಡುವಿನ ಪ್ರದೇಶ ಮತ್ತು<br>(iii) ಸಮುದ್ರ ಮಟ್ಟದ ಏರಿಕೆಯಿಂದ ಮುಳುಗಡೆ ಸಾಧ್ಯತೆಯ ಪ್ರದೇಶಗಳು.<br><br>2. ಕರಾವಳಿ ನಿಯಂತ್ರಣ ವಲಯ – II :<br><br>ತೀರದ ರೇಖೆವರೆಗೆ ಅಥವಾ ಅದಕ್ಕೆ ಹತ್ತಿರವಾಗಿ ಅಭಿವೃದ್ಧಿಪಡಿಸಿದ ಪ್ರದೇಶಗಳು.<br><br>ವಿವರಣೆ: ಎ, ಬಿ ಮತ್ತು ಸಿ ಈ ಉದ್ದೇಶಗಳಿಗಾಗಿ "ಅಭಿವೃದ್ಧಿಪಡಿಸಿದ ಪ್ರದೇಶ" ಎಂಬುದನ್ನು ಪುರಸಭಾ ಪರಿಮಿತಿಗಳಲ್ಲಿ ಅಥವಾ ಇನ್ನಾವುದೇ ಕಾನೂನು ಬದ್ಧವಾಗಿ ಹೆಸರಿಸಿದ ನಗರ ಪ್ರದೇಶದ ಮಿತಿಯೊಳಗೆ ಇರುವ ಮತ್ತು ಈಗಾಗಲೇ ಗಣನೀಯ ಪ್ರಮಾಣದಲ್ಲಿ ನಿರ್ಮಿತವಾಗಿರುವ ಮತ್ತು ಚರಂಡಿ ವ್ಯವಸ್ಥೆ ಸಂಪರ್ಕ ಮಾರ್ಗಗಳು, ಮತ್ತಿತರ ನೀರು ಸರಬರಾಜು ಹಾಗೂ ಒಳಚರಂಡಿ ಮುಖ್ಯ ಪೈಪು ಹೊಂದಿರುವ ಪ್ರದೇಶಗಳು ಎಂದು ಪರಿಭಾಷಿಸಲಾಗಿದೆ.<br><br>3. ಕರಾವಳಿ ನಿಯಂತ್ರಣ ವಲಯ – III :<br><br>ಹೋಲಿಕೆಯಲ್ಲಿ ಯಾವುದೇ ಚಟುವಟಿಕೆಯಿಲ್ಲದ ಮತ್ತು ಪ್ರವರ್ಗ I ಅಥವಾ II ಕ್ಕೆ ಸೇರಿರದ ಪ್ರದೇಶಗಳು ಇದರಲ್ಲಿ (ಅಭಿವೃದ್ಧಿ ಹೊಂದಿದ ಮತ್ತು ಹೊಂದಿರದ) ಗ್ರಾಮೀಣ ಪ್ರದೇಶದ ಕರಾವಳಿ ಪ್ರದೇಶಗಳು ಮತ್ತು ಸಾಕಷ್ಟು ಕಟ್ಟಡ ನಿರ್ಮಾಣವಾಗಿರದ ಮುನಿಸಿಪಲ್ ಮಿತಿಗಳಲ್ಲಿ ಅಥವಾ ಇತರ ಕಾನೂನುಬದ್ಧವಾಗಿ ನಗರ ಪ್ರದೇಶವೆಂದು ಹೆಸರಿಸಲಾದ ಪ್ರದೇಶಗಳೊಳಗಿನ ಪ್ರದೇಶಗಳನ್ನು ಒಳಗೊಳ್ಳುತ್ತದೆ.<br><br>4. ಕರಾವಳಿ ನಿಯಂತ್ರಣ ವಲಯ – IV :<br>(i) ಇಳಿತ ರೇಖೆಯಿಂದ ಸಮುದ್ರದ ಕಡೆ ಹನ್ನೆರಡು ನ್ಯಾಟಿಕಲ್ ಮೈಲುಗಳ ವರೆಗಿನ ಜಲಪ್ರದೇಶ.<br>(ii) ಉಬ್ಬರ ವಿಳಿತಗಳ ಪ್ರಭಾವಕ್ಕೆ ಒಳಗಾಗುವ ಜಲನಿಕಾಯಗಳ ಜಲಪ್ರದೇಶವನ್ನು ಸಮುದ್ರದೆಡೆ ಸದರಿ ಜಲನಿಕಾಯದ ಮುಖಭಾಗದಿಂದ ಹಿಡಿದು ಉಬ್ಬರವಿಳಿತಗಳ ಪ್ರಭಾವಕ್ಕೀಡಾಗುವವರೆಗಿನ ಪ್ರದೇಶ ಇದನ್ನು ವರ್ಷದ ಅತಿ ಶುಷ್ಕ ಋತುವಿನಲ್ಲಿ ಪ್ರತಿ ಸಾವಿರಕ್ಕೆ ಐದು ಭಾಗಗಳಾಗಿ ಅಳೆಯಲಾಗುವುದು.<br><br>ಕರಾವಳಿ ನಿಯಂತ್ರಣ ವಲಯ ಅಧಿಸೂಚನೆ 1991 ರಲ್ಲಿ ಕರಾವಳಿ ನಿಯಂತ್ರಣ ವಲಯ III ಎಂದು ಗುರುತಿಸಿರುವ ಪ್ರದೇಶಗಳಲ್ಲಿ ಕೆಲವು ಪ್ರದೇಶಗಳು ಸದರಿ ಅಧಿಸೂಚನೆಯು ಅಸ್ತಿತ್ವಕ್ಕೆ ಬರುವ ಮುನ್ನವೇ ಅಭಿವೃದ್ಧಿ ಹೊಂದಿದ ನಗರ ಪ್ರದೇಶಗಳಾಗಿರುವಂತಹ ಪ್ರದೇಶಗಳನ್ನು ಕರಾವಳಿ ನಿಯಂತ್ರಣ |

| | | |
|---|---|---|
| | | ವಲಯ ಅಧಿಸೂಚನೆ 2011 ರ ಪ್ರಕಾರ ಕರಾವಳಿ ನಿಯಂತ್ರಣ II ಆಗಿ ಪರಿವರ್ತಿಸಬೇಕಾಗಿದೆ.<br><br>ಕೇಂದ್ರ ಸರ್ಕಾರದ ಸಿ.ಆರ್.ಜೆಡ್. ಅಧಿಸೂಚನೆಯಲ್ಲಿ ಗೋವಾ ಮತ್ತು ಕೇರಳ ರಾಜ್ಯಗಳಲ್ಲಿ ಹಿನ್ನೀರಿನ 5 ಪಿಪಿಟಿ ಲವಣ ಸಾಂದ್ರತೆವರೆಗಿನ ನದಿಯ ಇಕ್ಕೆಲಗಳಲ್ಲಿ ನಡುಗಡ್ಡೆ / ದ್ವೀಪಗಳಲ್ಲಿ ಸಿ.ಆರ್.ಜೆಡ್. ಮಿತಿಯನ್ನು 50 ಮೀ. ಗೆ ನಿಗಧಿಪಡಿಸಲಾಗಿದೆ. ಆದರೆ ಇತರೆ ರಾಜ್ಯಗಳಲ್ಲಿಯ ಹಿನ್ನೀರಿನ ನಡುಗಡ್ಡೆ/ದ್ವೀಪಗಳಲ್ಲಿ ಸಿ.ಆರ್.ಜೆಡ್. ಮಿತಿಯನ್ನು 100 ಮೀ. ಗೆ ನಿಗಧಿಪಡಿಸಲಾಗಿದೆ. ಆದರೆ, ಸಮುದ್ರದ ಉಬ್ಬರ ರೇಖೆಯಿಂದ ಸಿ.ಆರ್.ಜೆಡ್. ಮಿತಿಯು ಇತರೆ ರಾಜ್ಯಗಳಲ್ಲಿ ಇದ್ದಂತೆ 500 ಮೀ. ಇರುತ್ತದೆ. ಸಿ.ಆರ್.ಜೆಡ್. ಅಧಿಸೂಚನೆಯಲ್ಲಿರುವ ವ್ಯತ್ಯಾಸವನ್ನು ಮನಗಂಡು ಗೋವಾ ಮತ್ತು ಕೇರಳ ಮಾದರಿಯಲ್ಲಿ ಕರ್ನಾಟಕ ಕಡಲ ತೀರದಲ್ಲಿರುವ ನಡುಗಡ್ಡೆ / ದ್ವೀಪಗಳಲ್ಲಿನ ಸಿ.ಆರ್.ಜೆಡ್. ಮಿತಿಯನ್ನು 50 ಮೀಟರ್‌ಗೆ ನಿಗದಿಪಡಿಸಲು ರಾಜ್ಯ ಸರ್ಕಾರದಿಂದ ಪ್ರಸ್ತಾವನೆಯನ್ನು ಕೇಂದ್ರ ಸರ್ಕಾರಕ್ಕೆ ದಿನಾಂಕ: 18.02.2014 ರಂದು ಸಲ್ಲಿಸಲಾಗಿರುತ್ತದೆ. ಮತ್ತೊಮ್ಮೆ ಕೇಂದ್ರ ಸರ್ಕಾರಕ್ಕೆ ದಿನಾಂಕ: 03.05.2017 ರಂದು ಪತ್ರ ಬರೆದು ಪ್ರಸ್ತಾವನೆಯನ್ನು ತ್ವರಿತವಾಗಿ ಪರಿಗಣಿಸಲು ಕೋರಲಾಗಿದೆ. |
| ಈ) | ವಲಯಗಳನ್ನು ನಿರ್ಧರಿಸುವಾಗ ಮಾನವ ನಿರ್ಮಿತ ಕಿಂಡಿ ಅಣೆಕಟ್ಟುಗಳು, ಅವುಗಳ ನಿರ್ವಹಣೆ ಕೊರತೆಯನ್ನು ಮಾನದಂಡವಾಗಿ ಪರಿಗಣಿಸುವುದು ಸರಿಯಾದ ಕ್ರಮವೇ; ಅಲ್ಪಕಾಲೀನ ನಿರ್ವಹಣೆಯು ದೀರ್ಘಕಾಲೀನವಾಗಿ ಪರಿಣಾಮ ಬೀರುವ ಅಂಶವನ್ನು ನಿರ್ಧರಿಸುವುದೇ; ಈ ಬಗ್ಗೆ ಸರ್ಕಾರದ ಕ್ರಮವೇನು? | ಕರಾವಳಿ ನಿಯಂತ್ರಣ ವಲಯಗಳನ್ನು ಗುರುತಿಸುವಾಗ ಕರಾವಳಿ ನಿಯಂತ್ರಣ ವಲಯ ಅಧಿಸೂಚನೆ ಪ್ರಾರಾ (i) & (ii) ರಂತೆ ಹಾಗೂ ಮೇಲೆ ತಿಳಿಸಿದ ಮಾನದಂಡಗಳ ಮೇಲೆ ಕರಾವಳಿ ನಿಯಂತ್ರಣ ವಲಯಗಳನ್ನು ನಿರ್ಧರಿಸಲಾಗಿದೆ. ಆದರೆ ಕಿಂಡಿ ಅಣೆಕಟ್ಟುಗಳ ನಿರ್ವಹಣೆ ಕೊರತೆ ಮೇರೆಗೆ ಯಾವುದೇ ವಲಯವನ್ನು ನಿರ್ಧರಿಸಲಾಗುತ್ತಿಲ್ಲ.<br><br>ಸಮುದ್ರಕ್ಕೆ ಸಂಪರ್ಕಿತವಾದ ಉಬ್ಬರವಿಳಿತ ಪ್ರಭಾವಿತ ಜಲನಿಕಾಯಗಳ ಉದ್ದಕ್ಕೂ ಭೂಮಿಯ ಕಡೆಗೆ ಉಬ್ಬರ ರೇಖೆಯಿಂದ 100 ಮೀ. ಗಳವರೆಗಿನ ಭೂಮಿ ಅಥವಾ ಕೊಲ್ಲಿಯ ಅಗಲ ಇವೆರಡರಲ್ಲಿ ಯಾವುದು ಕಡಿಮೆಯೋ ಆ ಪ್ರದೇಶಕ್ಕೆ ಕರಾವಳಿ ನಿಯಂತ್ರಣ ವಲಯ ಅನ್ವಯಿಸುತ್ತದೆ. ಉಬ್ಬರವಿಳಿತ ಪ್ರಭಾವಿತ ಜಲನಿಕಾಯಗಳ (ಸಮುದ್ರಗಳು, ಕೊಲ್ಲಿಗಳು, ಅಳಿವೆಗಳು, ಸಂದುಕಡರು, ಹಿನ್ನೀರು, ಲಗೂನ್‌ಗಳು ಸಮುದ್ರ ಅಥವಾ ಕೊಲ್ಲಿಗೆ ಸಂಪರ್ಕಿತ ಕೊಳಗಳು ಇತ್ಯಾದಿ) ಉದ್ದಕ್ಕೂ ಮತ್ತು ಎಷ್ಟು ದೂರದವರೆಗೆ ಅಭಿವೃದ್ಧಿಯನ್ನು ನಿಯಂತ್ರಿಸಬೇಕು ಎಂಬುದು ಉಬ್ಬರವಿಳಿತದ ಪರಿಣಾಮಗಳನ್ನು ಎಷ್ಟು ದೂರದವರೆಗೆ ಅನುಭವಿಸಲಾಗುತ್ತಿದೆ ಎಂಬುದರ ಆಧಾರದ ಮೇಲೆ ನಿರ್ಧಾರವಾಗುತ್ತದೆ. ಇದನ್ನು ವರ್ಷದ ಅತಿ ಶುಷ್ಕ ಅವಧಿಯಲ್ಲಿ ಅಳತೆ ಮಾಡುವಾಗ ಸಾವಿರಕ್ಕೆ ಐದು ಭಾಗದಷ್ಟು ಉಪ್ಪಿನಂಶದ ಸಾಂದ್ರತೆಯನ್ನು (ppt) ಆಧರಿಸಿ ನಿರ್ಣಯಿಸಲಾಗುತ್ತದೆ. |

(ಬಿ. ರಮಾನಾಥ ರೈ)

ಅರಣ್ಯ, ಜೀವಿಪರಿಸ್ಥಿತಿ ಮತ್ತು ಪರಿಸರ ಸಚಿವರು

ಸಂಖ್ಯೆ: ಅಪಜೀ 23 ಇಎನ್‌ವಿ 2018.